ಓ ಎಸ್. ನಂ.111/2022

ಪಿ.ಡಬ್ಲ್ಯೂ: 3

**ದಿನಾಂಕಃ 17-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 9 ನೇ ಪ್ರತಿವಾದಿ ಪರ ಶ್ರೀ ಎಂ.ಹೆಚ್ ವಕೀಲರಿಂದಃ**

ನಾನು ಶಾಲೆಯ ಕಲಿತಿರುವುದಿಲ್ಲ. ಆದರೆ ಸಹಿ ಮಾಡುತ್ತೇನೆ. ವಾದಿಯ ತಂದೆಯನ್ನು ನಾನು ನೋಡಿರುತ್ತೇನೆ. ಆತನು ತೀರಿಕೊಂಡಿರುತ್ತಾನೆ. ಸದರಿ ಶರಣಪ್ಪ ನನಗೆ ಗೊತ್ತಿದ್ದ ಆಗೆ ತೀರಿಕೊಂಡು 16 ವರ್ಷಗಳಾಗಿರುತ್ತವೆ. ಶರಣಪ್ಪನ ಮಗಳಾದ ವಾದಿಗೆ 26 ವರ್ಷಗಳಾಗಿರಬಹುದು. ಅದೇ ರೀತಿ 6 ನೇ ಪ್ರತಿವಾದಿಗೆ 23 ವರ್ಷಗಳಾಗಿರಬಹುದು, 7 ನೇ ಪ್ರತಿವಾದಿಗೆ ಎಷ್ಟು ವರ್ಷ ವಯಸ್ಸು ಅಂತ ನನಗೆ ಗೊತ್ತಿರುವುದಿಲ್ಲ. ಶರಣಪ್ಪನ ಮಕ್ಕಳ ಪೈಕಿ ಯಾರು ದೊಡ್ಡವರು ಅಂತ ನನಗೆ ಗೊತ್ತಿರುವುದಿಲ್ಲ.

2. ಶರಣಪ್ಪನ ಕಟುಂಬಕ್ಕೆ ಒಟ್ಟು 30 ಎಕರೆ ಜಮೀನುಗಳು ಇದ್ದವು. ಸದರಿ ಜಮೀನಿಗೆ 3 ಸರ್ವೆ ನಂ. ಇದ್ದವು. ಅವುಗಳ ಸರ್ವೆ ನಂ.62 ಬಯಲುಕುಂಟಿ ಸೀಮೆ, ಸರ್ವೇ ನಂ 66 ಬಯಲುಕುಂಟಿ ಸೀಮೆ ಮತ್ತು ಗೆದ್ದಲಮರಿ ಸೀಮೆಯಲ್ಲಿ 11 ಎಕರೆ ಜಮೀನು ಇರುತ್ತದೆ. ಆದರೆ ಅದರ ಸರ್ವೆ ನಂಬರ ನನಗೆ ಗೊತ್ತಿರುವುದಿಲ್ಲ.

3. ವಾದಿಗೆ ಮದುವೆಯಾಗಿ ಅಂದಾಜು 15 ವರ್ಷಗಳು ಆಗಿದೆ, 6 ನೇ ಪ್ರತಿವಾದಿಗೆ ವದುವೆಯಾಗಿ 7 ವರ್ಷಗಳಾಗಿರುತ್ತವೆ. 7 ನೇ ಪ್ರತಿವಾದಿಗೆ ಮದುವೆಯಾಗಿ ಅಂದಾಜು 10 ವರ್ಷಗಳಾಗಿರಬಹುದು. 6 ನೇ ಪ್ರತಿವಾದಿಯ ಮದುವೆಯಾಗುವಾಗ ಅಂದಾಜು 20 ವರ್ಷ ವಯಸ್ಸು ಆಗಿರಬಹುದು. ವಾದಿ, 6 ಮತ್ತು 7 ನೇ ಪ್ರತಿವಾದಿಯರ ಮದುವೆಯಾದಾಗ ಅಂದಾಜು 20 ವರ್ಷ ವಯಸ್ಸು ಆಗಿರಬಹುದು.

4. ವಾದಿಯರ ಕುಟುಂಬಕ್ಕೆ 4 ನೇ ಪ್ರತಿವಾದಿ ಹಿರಿಯ ಎಂದರೆ ನಿಜ. ಶರಣಪ್ಪ ಇತನು ಇಬ್ಬರಿಗೆ ಜಮೀನನ್ನು ಮಾರಾಟ ಮಾಡಿರುತ್ತಾನೆ. ಭೀಮಣ್ಣ ಮತ್ತು ಪರಸಪ್ಪ ತಂದೆ ಹಲವಪ್ಪ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ. ಶರಣಪ್ಪ ತೀರಿಕೊಂಡ ನಂತರ 4 ನೇ ಪ್ರತಿವಾದಿಯು ಸಾಲ ಮಾಡಿರುತ್ತಾನೆ. 4 ನೇ ಪ್ರತಿವಾದಿಯೇ ಸಾಲ ಮಾಡಿರುತ್ತಾನೆ.

5. ವಾದಿಯ ತಾಯಿಯ ಹೆಸರು ಗಂಗವ್ವ ಇರುತ್ತದೆ. ಗಂಗವ್ವ ಎನ್ನುವವಳು ತಮ್ಮ ಕುಟುಂಬಕ್ಕೆ ಆಸ್ತಿಗೆ ಸಂಬಂಧಿಸಿದಂತೆ ಖರೀದಿ ಕರಾರು ಪತ್ರ ಮಾಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಒಬ್ಬ ಬಸವರಾಜ ತಂದೆ ಕರಿಬಸಯ್ಯ ಗಣಚಾರ್ಯ ಇವರಿಗೆ ವಾದಿಯ ತಾಯಿ ಗಂಗವ್ವ ಇವಳು ಖರೀದಿ ಪತ್ರ ಮಾಡಿಕೊಟ್ಟಿರುತ್ತಾಳೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆಯಲಾಗಿದೆ ಅಂತ ನನಗೆ ಗೊತ್ತಿರುವುದಿಲ್ಲ. ಕೊಡಕಲ್ ಪೋಲಿಸ್ ಠಾಣೆಯಲ್ಲಿ ರೌಡಿಸಿಟರನಲ್ಲಿ ನನ್ನ ಹೆಸರು ದಾಖಲಾಗಿದೆ ಎಂದರೆ ಸರಿ.

6. 2005 ರಲ್ಲಿ ಅಸಲು ದಾವಾ ನಂ. 51/2005 ದಾವೆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ 4 ನೇ ಪ್ರತಿವಾದಿಯಾಗಿತ್ತೇನೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ 9 ನೇ ಪ್ರತಿವಾದಿ ತಂದೆ ನನ್ನ ವಿರುದ್ಧ ಸಾಕ್ಷಿ ಹೇಳಿದ್ದನು ಎಂದರೆ ನನಗೆ ಗೊತ್ತಿರುವುದಿಲ್ಲ. ಆ ಕಾರಣಕ್ಕಾಗಿ ಆ ದಾವೆಯಲ್ಲಿ ನಮ್ಮ ವಿರುದ್ಧ ಸಾಕ್ಷಿ ನುಡಿದಿದ್ದನ್ನು ಗಮನದಲ್ಲಿ ಇಟ್ಟುಕೊಂಡು ನಾನು ವಾದಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 6 ಮತ್ತು 7 ನೇ ಪ್ರತಿವಾದಿಯ ಮದುವೆ ಸಾಲಕ್ಕಾಗಿ 4 ನೇ ಪ್ರತಿವಾದಿಯ ಆಸ್ತಿ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿಯ ವಿರುದ್ಧ ನನಗೆ ದ್ವೇಷ ಇರುವುದರಿಂದ ನಾನು ಈ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. 9 ನೇ ಪ್ರತಿವಾದಿಯು ಹೆಚ್ಚುವರಿ ದಿವಾನಿ ನ್ಯಾಯಾಲಯದಲ್ಲಿ ಅಸಲು ದಾವಾ ನಂ.6/2024 ನೆದ್ದನು ದಾಖಲಿಸಿದ್ದನು ಎಂದರೆ ನನಗೆ ಗೊತ್ತಿರುವುದಿಲ್ಲ. ಆ ಕಾರಣಕ್ಕಾಗಿ ನಾನು ದಾವೆಯಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: 1 ರಿಂದ 8 ನೇ ಪ್ರತಿವಾದಿಯು ಪ್ರತಿವಾದಿ ಪತ್ರ ಸಲ್ಲಿಸದೇ ಇರುವುದರಿಂದ ಅವರ ವಿರುದ್ಧ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ: ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.